# ಕಾಡೆಮ್ಮೆ ಮರಿ ಹುಲ್ಲು ತಿನ್ನುವ ಪ್ರಸಂಗ

■ ವಸುಂಧರಾ ಕದಲೂರು



ಸಂತೋಷ್ ಸಸಿಹಿತ್ಲು

ಒಂದು ಕಾಡಿನಲ್ಲಿ ಕಾಡೆಮ್ಮೆ ಸಂಸಾರ ವಾಸಿಸುತ್ತಾ ಇರುತ್ತೆ. ಅದರಲ್ಲಿ ಅಮ್ಮ ಕಾಡೆಮ್ಮೆ ಅಪ್ಪ ಕಾಡೆಮ್ಮೆ ಮತ್ತು ಒಂದು ಮರಿ ಕಾಡೆಮ್ಮೆ ಇರುತ್ತವೆ. ಕಾಡೆಮ್ಮೆ ಮರಿ ಸ್ವಲ್ಪ ತುಂಟ ಮರಿ. ಹೊಟ್ಟೆ ಹಸಿವಾದಾಗ ಅಮ್ಮನ ಹಾಲು ಕುಡಿಯುತ್ತಾ ಅಲ್ಲಿ ಇಲ್ಲಿ ನೆಗೆಯುತ್ತಾ, ಹುಳುಹುಪ್ಪಟೆ ತಿನ್ನಲು ಬರುವ ಹಕ್ಕಿಗಳನ್ನು ಗುಮ್ಮುವ ಹಾಗೆ ಅಟ್ಟಿಸಿಕೊಂಡು ಹೋಗಿ ಹಾರಿಸುತ್ತಾ, ಅಳಿಲು, ಜಿಂಕೆ ಮೊಲದ ಮರಿಗಳ ಜೊತೆ ಆಟ ಆಡಿಕೊಳ್ತಾ ಬೆಳೆಯುತ್ತಿರುತ್ತೆ.

ಆ ಮರಿಗೆ, ಬರ್ತಾ ಬರ್ತಾ ಬರೀ ಹಾಲು ಕುಡಿಯೋಕೆ ಬೇಜಾರಾಗುತ್ತೆ. ಕಾಡಿನಲ್ಲಿ ಬೆಳೆದ ಹಸಿರು ಹುಲ್ಲು, ಸೊಪ್ಪು, ಕಾಡು ತರಕಾರಿ, ಕಾಡು ಹಣ್ಣುಗಳನ್ನು ತನ್ನ ಅಪ್ಪಅಮ್ಮಂದಿರ ಹಾಗೆ ತಾನೂ ತಿನ್ನಬೇಕು ಅನ್ಸುತ್ತೆ. ಕಾಡಿನಲ್ಲಿ ಸಮೃದ್ಧವಾಗಿ ಬೆಳೆದಿರುವ ಹಸಿರನ್ನು ಹೊಟ್ಟೆ ತುಂಬುವಷ್ಟು ಗಬಗಬಾಂತ ತಿಂದು ಆಮೇಲೆ ಆರಾಮಾಗಿ ಮರದ ಕೆಳಗೆ ವಿಶಾಲವಾಗಿ ಹರಡಿದ ನೆರಳಿನಲ್ಲಿ ಕುಳಿತು ನಿಧಾನವಾಗಿ ಮೆಲುಕು ಹಾಕಬೇಕೂಂತ ಆಸೆನೂ ಆಗುತ್ತೆ.

ಆದ್ರೆ, ಕಾಡೆಮ್ಮೆ ಮರಿಯ ಹಲ್ಲುಗಳು ಇನ್ನೂ ಹಾಲುಹಲ್ಲುಗಳಾಗಿದ್ದವು. ಹುಲ್ಲು ತಿನ್ನೋದಕ್ಕೆ, ತಿಂದ ಸೊಪ್ಪನ್ನು ನೊರಕಿಸೋದಕ್ಕೆ ಹಲ್ಲುಗಳು ಸರಿಯಾಗಿ ಬೆಳೆದಿರಲಿಲ್ಲ. ಹಾಗೆ ಗಟ್ಟಿ ಹಲ್ಲುಗಳು ಬೆಳೆಯದೇ ಇದ್ದುದರಿಂದ ನಿನಗೆ ಈಗ ಬರೀ ಹಾಲನ್ನಷ್ಟೇ ಕುಡಿಸೋದು ಅಂತ ಅಮ್ಮ ಕಾಡೆಮ್ಮೆ ಹೇಳ್ತಿತ್ತು. ಜೊತೆಗೆ ಮರಿಯ ಜಠರ ಹಾಗೂ ಕರುಳುಗಳು ಜೀರ್ಣಕ್ರಿಯೆ ಸರಿಯಾಗಿ ಮಾಡಲು ಬೆಳೆದಿರೋದಿಲ್ಲ ಅಂತ ಅಪ್ಪ ಕಾಡೆಮ್ಮೆನೂ ವೈಜ್ಞಾನಿಕವಾಗಿಯೂ ವಾದಿಸ್ತಾ ಮರಿ ಹುಲ್ಲು ಸೊಪ್ಪು ಈಗಲೇ ತಿನ್ನೋದು ಬೇಡ ಅಂತ ಹೇಳ್ತಿತ್ತು. ಹೀಗೆ ಹಲವಾರು ಕಾರಣಗಳಿಂದ ಹುಲ್ಲು ಸೊಪ್ಪು ತಿನ್ನೋಕೆ ಕಾಡೆಮ್ಮೆ ಮರೀಗೆ ಅಮ್ಮಅಪ್ಪ ಒಪ್ಪಿಗೆ ಕೊಟ್ಟಿರಲಿಲ್ಲ.

ಸ್ವಲ್ಪ ದಿನ ಸುಮ್ಮನಿದ್ದ ಪುಟಾಣಿ ಮರಿ ಕಣ್ಣಿಗೆ ತಂಪು ನೀಡ್ತಿದ್ದ, ಮೂಗರಳಿಸಿದರೆ ಘಮ್ಮನೆ ತಾಜಾಗಾಳಿಯಲ್ಲಿ ತೇಲಿ ಬರ್ತಿದ್ದ ಹಸಿರು ಚಿಗುರು ಹುಲ್ಲಿನ ಮಂದ ವಾಸನೆಯಿಂದ ಹಸಿವು ಕೆರಳ್ತಾ ಇತ್ತು. ಅದೊಂದು ದಿನ ಮರಿ ಪುನಃ ತುಂಬಾ ಹಟ ಮಾಡ್ತು. ಆಗ ಅಮ್ಮ ತುಂಬಾ ಎಳೆಯ ಚಿಗುರಿನ ಹುಲ್ಲನ್ನು ಮಾತ್ರ ತಿನ್ನಲು ಹೇಳುತ್ತಾ, ‘ನೋಡಪ್ಪೂ, ಕಾಡಿನಲ್ಲಿ ಮೇಯೋವಾಗ ತುಂಬಾ ಹುಷಾರಾಗಿ ಇರಬೇಕು. ಎಲ್ಲಾ ಸೊಪ್ಪು, ಹುಲ್ಲು, ಹಣ್ಣುಗಳು ತಿನ್ನೋದಕ್ಕೆ ಯೋಗ್ಯವಾಗಿರೋದಿಲ್ಲ. ಹಲವಾರು ಹೂ ಹಣ್ಣು ಸೊಪ್ಪುಗಳು ವಿಷಕಾರಿಯಾಗಿರುತ್ತವೆ. ಗೊತ್ತಿಲ್ಲದೇ ಅವುಗಳನ್ನು ತಿನ್ನೋದ್ರಿಂದ ವಾಂತಿ, ಬೇಧಿ, ಸುಸ್ತು, ಕಣ್ಣು ಮಂಜಾಗೋದು ಹೀಗೆಲ್ಲಾ ಆಗುತ್ತೆ. ತುಂಬಾ ವಿಷ ಇರುವ ಸೊಪ್ಪು ತಿಂದ್ರೆ ಪ್ರಾಣಕ್ಕೇ ಅಪಾಯ ಇರುತ್ತೆ. ಇದರ ಜೊತೆಗೆ ಮೇಯ್ತಾ ಇರೋವಾಗ ಮೈ ಮರೆತ್ರೆ, ಬೇಟೆಗಾರ ಪ್ರಾಣಿಗಳು ಹಾರಿ ಹಿಡಿಯುತ್ತವೆ. ಅವು ಸದಾಕಾಲ ಹೊಂಚು ಹಾಕ್ತಿರುತ್ತವೆ. ತುಂಬಾ ಹುಷಾರಾಗಿ, ಮೈಯೆಲ್ಲಾ ಕಣ್ಣಾಗಿ ಮೇಯಲು ಹೋಗಬೇಕು. ಗುಂಪಿನ ಮಧ್ಯದಲ್ಲೇ ಇರಬೇಕು’ ಎಂದು ಮರಿಗೆ ಬುದ್ಧಿ ಹೇಳ್ತು.

ಅಮ್ಮನ ಬುದ್ಧಿವಾದ ಕೇಳಿದ ಮರಿಗೆ ಸ್ವಲ್ಪ ಹೆಚ್ಚು ಭಯವಾಯ್ತು. ಆ ಭಯದಿಂದ ಸ್ವಲ್ಪ ದಿನ ಹುಲ್ಲುಸೊಪ್ಪು ತಿನ್ನಲು ಹಟ ಮಾಡ್ದೆ ಸುಮ್ಮನಿರುತ್ತೆ. ಆದ್ರೆ ಒಂದಿನ, ‘ನಾನು ಅಮ್ಮ ಅಪ್ಪನ ಜೊತೆಗೇ ಇದ್ದು, ಅವರು ತಿನ್ನೋ ಹುಲ್ಲು ಸೊಪ್ಪನ್ನೇ ತಿಂತೀನಿ. ಆಗ ಯಾವ ವಿಷದ ಸೊಪ್ಪನ್ನೂ ತಿನ್ನೋಲ್ಲ, ಯಾವ ಬೇಟೆಗಾರ ಪ್ರಾಣೀನೂ ಬೇಟೆ ಆಡೋಲ್ಲ. ಹಾಗಾಗಿ ನನಗೆ ಯಾವ ತೊಂದರೇನೂ ಆಗೋಲ್ಲ ಅಲ್ವಾ?’ ಅಂತ ಯೋಚಿಸಿ, ತನ್ನ ಬುದ್ಧಿವಂತಿಕೆಗೆ ಜಂಭಪಟ್ಕೊಂಡು ತನ್ನ ಬಾಲದಿಂದ ತನ್ನ ಬೆನ್ನನ್ನು ತಟ್ಟಿಕೊಳ್ಳುತ್ತೆ.

ಅದೊಂದಿನ ಅಪ್ಪ, ‘ನಂಗಿವತ್ತು ಸೊಪ್ಪು ತಿನ್ನಬೇಕನ್ಸಿದೆ. ನಾನು ಸಣ್ಣ ಗಿಡ ಹುಡ್ಕೊಂಡು ಹೋಗ್ತೀನಿ. ನೀನೂ ಬರ್ತೀಯಾ?’ ಅಂತ ಅಮ್ಮನ್ನ ಕೇಳುತ್ತೆ. ಅಮ್ಮ, ‘ಮೊನ್ನೆ ರಾತ್ರಿ ಮಳೆ ಬಂದಿತ್ತಲ್ಲಾ ಆ ಸೀಬೇಕೆರೆ ಪಕ್ಕದ ಬಯಲಲ್ಲಿ ತುಂಬಾ ಹಸಿರು ಹುಲ್ಲು ಬೆಳೆದಿದೆಯಂತೆ. ಸಂಜೆ ಮೆಲುಕು ಹಾಕ್ತಾ ಕುಳಿತಿದ್ದಾಗ ಗುಂಡಮ್ಮ ಮೊಲ ಹೇಳ್ತು. ನಾನು ಅಲ್ಲಿಗೇ ಹುಲ್ಲು ತಿನ್ನಲು ಹೋಗ್ತೀನಿ’ ಎಂದು ಹೇಳ್ತು.

ಇವತ್ತು ಏನಾದ್ರು ಮಾಡಿ ಅಪ್ಪಅಮ್ಮನ ಜೊತೆ ಹೋಗಿ ಹುಲ್ಲನ್ನೋ ಸೊಪ್ಪನ್ನೋ ತಿನ್ನಬೇಕು ಅಂದ್ಕೊಂಡಿದ್ದ ಮರೀಗೆ ಈಗ ಪೀಕಲಾಟಕ್ಕೆ ಬಂತು. ಒಬ್ಬೊಬ್ರು ಒಂದೊಂದು ದಿಕ್ಕಿಗೆ ಹೋಗ್ತಾ ಇದ್ದಾರೆ. ನಾನ್ಯಾವ ಕಡೆ ಹೋಗಲಿ? ಅಂತ ಯೋಚಿಸ್ತಿರೋವಾಗ, ‘ಮರೀನಾ ನೀನು ಕರೆದುಕೊಂಡು ಹೋಗು. ಹುಲ್ಲು ತಿನ್ಬೇಕು ಅಂತಿತ್ತಲ್ಲಾ. ಹೊಸ ಚಿಗುರು ಬಂದಿರೋದ್ರಿಂದ ಅದನ್ನೇ ತಿಂದು ಅಭ್ಯಾಸ ಮಾಡಿಕೊಳ್ಳಲಿ. ಕಷ್ಟ ಆದ್ರೆ ನಿನ್ನ ಹತ್ರ ಹಾಲನ್ನಾದ್ರೂ ಕುಡಿಯುತ್ತೆ’ ಅಪ್ಪ ಅಮ್ಮನಿಗೆ ಹೇಳಿದ್ದು ಕೇಳಿ ಮರಿಗೆ ತುಂಬಾ ಖುಷಿಯಾಯ್ತು.

ಜಿಗಿಯುತ್ತಾ ಕುಣಿಯುತ್ತಾ ನೆಗೆಯುತ್ತಾ ಅಮ್ಮನ ಜೊತೆ ಹೊರಟ ಕಾಡೆಮ್ಮೆ ಮರಿ, ದಾರಿಯಲ್ಲಿ ಭೇಟಿಯಾದ ಗೆಳೆಯರಾದ ಜಿಂಕೆ ಮರಿ, ಅಳಿಲು ಮರಿ, ಮೊಲದ ಮರಿಗಳಿಗೆ ಬಾಲ ಎತ್ತಿ ಬೀಸುತ್ತಾ ‘ಹಾಯ್ ಹುಲ್ಲು ತಿನ್ನಲು ಹೋಗ್ತಿದ್ದೀನಿ ಬಾಯ್’ ಎಂದು ಹೇಳುತ್ತಾ ಹೊರಟಿತು.

ಸ್ವಲ್ಪ ದೂರ ಹೋದದ್ದೇ ಕಣ್ಣರಳಿಸುವಷ್ಟು ಹಸಿರೆಂದರೆ ಹಸಿರು ಬಯಲೆಲ್ಲಾ ಹಸಿರು. ಗಮ್ಮೆನ್ನುವ ಗಾಳಿಯೂ ಹಸಿರು ತಂದು ಮೂಗಿಗೆ ಸೋಕಿಸುತ್ತಿತ್ತು, ಕಣ್ಣುಗುಡ್ಡೆಗಳಿಗೂ ಹಸಿರು ಬಣ್ಣವೇ ಮೆತ್ತಿಕೊಂಡಿತ್ತು, ಚಿಗುರು ಹುಲ್ಲಿನ ಮೇಲಿನ ಇಬ್ಬನಿ ಹನಿಗಳು ಗಾಳಿಗೆ ಕೊಟ್ಟ ತೇವಾಂಶಕ್ಕೆ ಕಾಡೆಮ್ಮೆ ಮರಿಯ ಮೈ ತಣ್ಣಗೆ ಸಣ್ಣಗೆ ಕಂಪಿಸಿತು. ಉತ್ಸಾಹ ಉಲ್ಲಾಸದಿಂದ ಇನ್ನೇನು ಹಸಿರಾದ ಹಸಿಯಾದ ಚಿಗುರು ಹುಲ್ಲಿಗೆ ಬಾಯಿ ಹಾಕಬೇಕು. ‘ಘರ್ ರ್ ರ್ ರ್ ರ್’ ಎಂಬ ಕಾಡನ್ನೇ ನಡುಗಿಸುವ ಘರ್ಜನೆ ಸೀಬೇಕೆರೆಯತ್ತಲಿಂದ ಕೇಳಿ ಬಂದು ಕಾಡೆಮ್ಮೆ ಅಮ್ಮ ಮರಿಯನ್ನು ತಡೆಯಿತು. ಸುತ್ತಲೂ ಪರೀಕ್ಷಿಸಿ ಹಸಿದ ಹೆಣ್ಣು ಹುಲಿ ತನ್ನ ಮಕ್ಕಳೊಡನೆ ಬೇಟೆಗೆ ಹೊಂಚು ಹಾಕಿರುವುದರ ಸುಳಿವು ಸಿಕ್ಕ ಕೂಡಲೇ ತನ್ನ ಹಾಗೂ ತನ್ನ ಮರಿಯ ರಕ್ಷಣೆಗಾಗಿ ಗುಡ್ಡದ ಕಡೆಗೆ ಮುಖ ಮಾಡಿ ಮರಿಯ ಜೊತೆ ಓಡಿತು. ■